



ಸ್ವಾಮಿ ಆತ್ಮಜ್ಞಾನದ

ಸ್ವಾಮಿ ವಿವೇಕಾನಂದರ ಸೇವಾದರ್ಶವು ಅನೇಕ ಸೇವಾ ಸಂಸ್ಥೆಗಳ ಉಗಮಕ್ಕೆ ಕಾರಣ ವಾಗಿದೆ. ಈಗ ಶತಮಾನೋತ್ಸವವನ್ನು ಆಚರಿಸುತ್ತಿರುವ ಅಂಥ ಒಂದು ಸೇವಾ ಸಂಸ್ಥೆಯ ಕಿರು ಪರಿಚಯವನ್ನು ಮಾಡಿ ಕೊಟ್ಟಿರುವ ಸ್ವಾಮಿ ಆತ್ಮಜ್ಞಾನಂದರು ಮೈಸೂರು ರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿರುವರು.

---

೧೯೦೦ರ ಜೂನ್ ೧೨ನೆಯ ತಾರೀಖು. ಅಪರಾಹ್ನ ೩ ಘಂಟೆಯ ಸಮಯ. ಪ್ರಖರವಾದ ಬಿಸಿಲು ಭೂಮಿಯನ್ನು ಸುಡುತ್ತಿತ್ತು. ಚಾರುಚಂದ್ರ ದಾಸನು ಇದರ ಪರಿವೆಯೇ ಇಲ್ಲದೆ ವಾರಾಣಸಿಯ ರಸ್ತೆಯಲ್ಲಿ ಓಡಾಡುತ್ತಿದ್ದ. ವಿದ್ಯಾವಂತ ಯುವಕ, ಕೈತುಂಬ ಸಂಬಳ ಪಡೆಯುತ್ತಿದ್ದ. ಕಲ್ಕತ್ತೆಯ ಒಂದು ಪ್ರಸಿದ್ಧ ಕಾರ್ಯಾಲಯದಲ್ಲಿದ್ದರೂ, ಆಧ್ಯಾತ್ಮಿಕ ಜೀವನವನ್ನು ಅರಸಿ ಕಾಶಿಗೆ ಬಂದಿದ್ದನು. ತಾರುಣ್ಯದಲ್ಲೇ ವೈರಾಗ್ಯದ ಜ್ವಾಲೆ ಅವನ ಎಲ್ಲ ಐಹಿಕ ಬಯಕೆಗಳನ್ನು ಸುಟ್ಟು ಭಸ್ಮ ಮಾಡಿತ್ತು. ಆಗ ಅವನಿಗೆ ಸ್ವಾಮಿ ವಿವೇಕಾನಂದರ 'ಸಖನನ್ನು ಕುರಿತು' ಎಂಬ ಪದ್ಯವು ದೊರೆಯಿತು. ಅದನ್ನು ಓದಿದ ಚಾರುವಿಗೆ ಆ ಪದ್ಯದ ಸಾಲುಗಳ ಸತ್ಯದ ಅರಿವಾಗಿ, ದಿಗಂತಗಳೆಲ್ಲ ವಿಸ್ತರಿಸಿ, ರೋಮಾಂಚನವಾಗಿ ಧರ್ಮಕ್ಕೆ ಹೊಸ ಅರ್ಥವನ್ನೇ ಕಂಡುಕೊಂಡ.

'ಮಂತ್ರ, ತಂತ್ರ, ಪ್ರಾಣಾಯಾಮ, ಭಿನ್ನ ಭಿನ್ನ ಮತಗಳು, ವಿಜ್ಞಾನ, ತ್ಯಾಗ ಇವುಗಳೆಲ್ಲ ಬುದ್ಧಿಯ ಭ್ರಮೆ. ಪ್ರೇಮ, ಪ್ರೇಮ—ಇದೊಂದೇ ಏಕಮಾತ್ರ ಧನ... ಬ್ರಹ್ಮನಿಂದ ಹಿಡಿದು ಕೀಟ ಪರಮಾಣುವಿನವರೆಗೆ ಎಲ್ಲ ಭೂತಗಳಲ್ಲಿಯೂ ಪ್ರೇಮಮಯವಾಗಿರುವ ಬ್ರಹ್ಮನಿರುವನು. ನಿನ್ನ ಮನ ಪ್ರಾಣ ಶರೀರಗಳನ್ನು ಅವುಗಳ ಅಡಿಯಲ್ಲಿ ಅರ್ಪಿಸು. ನಿನ್ನ ಮುಂದಿರುವ ಅನಂತ ರೂಪಗಳಿವು. ಇವುಗಳನ್ನು ಬಿಟ್ಟು ನೀನೆಲ್ಲಿ ಈಶ್ವರನನ್ನು ಅರಸುವೆ? ಯಾರು ಜೀವಿಗಳನ್ನು ಪ್ರೀತಿಸುವರೋ ಅವರು ಈಶ್ವರನನ್ನು ಸೇವಿಸುವರು' (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಭಾಗ ೮, ಪುಟ ೩೮೯-೩೯೦)

ಸ್ವಾಮೀಜಿಯವರ ಈ ಮಾತುಗಳು ಚಾರುವಿನ ಮುಂದೆ ಒಂದು ಹೊಸ ಪ್ರಪಂಚವನ್ನೇ ತೆರೆದವು. 'ನಾನು ಮಾಡುವ ಕೆಲಸವೆಲ್ಲವೂ ಆತ್ಮಸುಖಕ್ಕಾಗಿ. ಎಲ್ಲ ಜೀವಿಗಳಲ್ಲೂ ಆ ಭಗವಂತನನ್ನು ಕಂಡು ಸೇವೆ ಸಲ್ಲಿಸಿದರೆ ಜೀವನ ಎಷ್ಟು ಅರ್ಥಪೂರ್ಣವಾಗುವುದು! ಇದೇ ಅವನನ್ನು ಸೇರುವ ಸಹಜ ಪಥ' ಎಂದು ಭಾವಿಸಿ ಸನಿಹದಲ್ಲೇ ಇದ್ದ ತನ್ನ ಸ್ನೇಹಿತ ಜಾಮಿನಿ ರಂಜನ್ ಮಜುಮ್ದಾರನಿಗೆ ಪದ್ಯವನ್ನು ಓದಿ ಹೇಳಿ, ಅದರಲ್ಲಿದ್ದ ಆಧ್ಯಾತ್ಮಿಕ ರಸಾಮೃತದ ಸವಿಯನ್ನು ಕುಡಿಸಿದ. ಚಾರುವಿನಲ್ಲಿ ಉರಿಯುತ್ತಿದ್ದ ಸೇವಾಭಾವದ, ವೈರಾಗ್ಯದ ಕಿಡಿ ಜಾಮಿನಿಗೂ ಬಿಸಿಮುಟ್ಟಿಸಿ ಸ್ಪಂದಿಸುವಂತೆ ಮಾಡಿತು. ಧರ್ಮದ ನವರೂಪವನ್ನು ಮನನ ಮಾಡುತ್ತಾ ಗೆಳೆಯರಿಬ್ಬರೂ ರಾತ್ರಿಯನ್ನು ಕಳೆದರು.

ಜೂನ್ ೧೩ರಂದು ಎಂದಿನಂತೆ ಜಾಮಿನಿ ಪವಿತ್ರ ಗಂಗೆಯಲ್ಲಿ ಮಿಂದು ಕರುಣಾಮಯನಾದ ವಿಶ್ವನಾಥನ ದರ್ಶನ ಪಡೆಯಲೋಸುಗ ಕೊಠಡಿಯಿಂದ ರಸ್ತೆಗಿಳಿದ. ನಡೆಯುತ್ತಿದ್ದಂತೆ ಆರ್ತನಾದವೊಂದು ಕೇಳಿಬಂತು. ನಿತ್ರಾಣದಿಂದ ಯಾರೋ ನರಳುತ್ತಿದ್ದ ಶಬ್ದವದು. ಕಾತರನಾಗಿ ಅತ್ತ ಧಾವಿಸಿದಾಗ ಕಂಡ ದೃಶ್ಯದಿಂದ ಅವನು ಆತಂಕ ಗಾಬರಿಗಳಿಂದ ಮರಗಟ್ಟಿಹೋದ. ಇನ್ನೇನು ಸಾವು ಎನ್ನುವಂತಹ ಪರಿಸ್ಥಿತಿಯಲ್ಲಿರುವ ಮುದುಕಿಯೋರ್ವಳು, ಬಟ್ಟೆ-ಮೈಯೆಲ್ಲ ಗಲೀಜಾಗಿದ್ದು, ನರಳುತ್ತಿದ್ದಳು. ಅವಳನ್ನು ಶುದ್ಧ ಮಾಡಿ, ತನ್ನ ಬಟ್ಟೆಯಿಂದ ಅವಳ ಕೃಶ ಶರೀರವನ್ನು ಸುತ್ತಿ, ಸುತ್ತಮುತ್ತ ಹೋಗುತ್ತಿದ್ದ ಜನರಿಂದ ನಾಲ್ಕಾಣೆ ಬೇಡಿ, ಆಕೆಗೆ ಹಾಲು ಕೊಂಡು ತಂದು ಕುಡಿಸಿ ಆರೈಕೆ ಮಾಡಿದ. ಊಟವನ್ನೂ ಬೇಡಿತಂದು ಉಣಿಸಿದ. ಆಹಾರ ಮತ್ತು ಪೋಷಣೆಯಿಂದ ಮುದುಕಿ ಚೇತರಿಸಿಕೊಂಡಳು. ಜಾಮಿನಿ, ಚಾರು, ಕೇದಾರ್‌ನಾಥ್ ಮೌಲಿಕ್ (ನಂತರ ಅಚಲಾನಂದರು) ಮತ್ತು ಅವನ ಸ್ನೇಹಿತರು ಆಕೆಯನ್ನು ಆಸ್ಪತ್ರೆಗೆ ಸಾಗಿಸಿ, ಭಿಕ್ಷೆಯ ಮೂಲಕ ಆಕೆಯ ಚಿಕಿತ್ಸೆಗೆ ಬೇಕಾಗುವ ವೆಚ್ಚವನ್ನು ಒದಗಿಸಿದರು. ನಿಶ್ಚಿತ ಸಾವಿನಿಂದ ಆಕೆ ಚೇತರಿಸಿಕೊಂಡಾಗ, ಇವರಿಗೆ ಆದ ಆನಂದಕ್ಕೆ ಪಾರವೇ ಇಲ್ಲ.

ನಿಃಸ್ವಾರ್ಥ ಸೇವೆಯ ನಿಜವಾದ ಮರ್ಮ ಮತ್ತು ಅದರಿಂದ ಬರುವ ತೃಪ್ತಿಯ ಸವಿ ಇವರನ್ನು ಸಂಘಟಿಸಿ ದಿಕ್ಕೆಟ್ಟವರಿಗಾಗಿ, ಅನಾಥರಿಗಾಗಿ ಸೇವೆ ಸಲ್ಲಿಸಲು ಒಂದು ಸೇವಾಕೇಂದ್ರ(*Home of Relief* )ವನ್ನು ಪ್ರಾರಂಭಿಸುವಂತೆ ಮಾಡಿದವು. ಮುಕ್ತಿಯನ್ನರಸಿ, ಕಾಶೀಪತಿಯಾದ ಶಿವನ ಸನ್ನಿಧಿಗೆ ತಮ್ಮ ಇಳಿವಯಸ್ಸಿನಲ್ಲಿ ಬರುತ್ತಿದ್ದ ಅನೇಕ ಯಾತ್ರಿಗಳಿಗೆ, ಅನಾಥರಿಗೆ ಸೇವೆ ಸಲ್ಲಿಸಬೇಕೆಂದು ನಿರ್ಧರಿಸಿ ಈ ತಂಡದವರು ಭಿಕ್ಷೆಯ ಮೂಲಕ ವಸತಿ, ಆಹಾರ ಮತ್ತು ವಸ್ತ್ರೌಷಧಗಳನ್ನು ಅವರಿಗೆ ಒದಗಿಸತೊಡಗಿದರು.

ಈ ನಿಃಸ್ವಾರ್ಥ ಸೇವೆ ಕಾಶಿಯ ಜನರನ್ನು ಆಕರ್ಷಿಸಿತು. ಜನ ಇವರ ಸಹಾಯಕ್ಕೆ ಮುಂದೆ ಬಂದರು. ಮೂರು ತಿಂಗಳಲ್ಲಿ ಒಂದು ಸಣ್ಣ ಬಾಡಿಗೆ ಮನೆಯನ್ನು ಕೇಂದ್ರದ ಚಟುವಟಿಕೆಗಳಿಗಾಗಿ ಪಡೆದರು. ೧೫ ಸೆಪ್ಟೆಂಬರ್ ೧೯೦೦ರಂದು ನಗರದ ಪ್ರತಿಷ್ಠಿತ ವ್ಯಕ್ತಿಗಳೆಲ್ಲ ಒಗ್ಗೂಡಿ ಈ ಯುವಕರ ಸೇವಾಕಾರ್ಯಕ್ಕೆ ಬೆಂಬಲ ನೀಡಲು 'ಬಡಜನರ ಪರಿಹಾರ ಸಂಸ್ಥೆ' (*Poor Mens' Relief Association, Benaras*)ಯನ್ನು ಸ್ಥಾಪಿಸಿದರು. ೧೯೦೧ರ ಫೆಬ್ರುವರಿಯಲ್ಲಿ ಸಂಸ್ಥೆಯು ರಾಮಪುರವೆಂಬಲ್ಲಿ ಒಂದು ದೊಡ್ಡ ಮನೆಗೆ ಸ್ಥಳಾಂತರಗೊಂಡಿತು. ಸ್ವಾಮಿ ವಿವೇಕಾನಂದರು ೧೯೦೨ರ ಫೆಬ್ರುವರಿ ತಿಂಗಳಿನಲ್ಲಿ ಬನಾರಸ್ಸಿಗೆ ಬಂದು ಈ ಯುವಕರಲ್ಲಿ ನವಚೇತನವನ್ನು



ಒಳರೋಗಿಗಳ ಆಸ್ಪತ್ರೆಯ ಕಟ್ಟಡ, ಕಾಶಿ ಸೇವಾಶ್ರಮ

ತುಂಬಿ ಪ್ರೋತ್ಸಾಹ ನೀಡಿದರು. ಅವರು ನೀಡಿದ ಉಪನ್ಯಾಸಗಳು ಮತ್ತು ಅವರ ಸಾನ್ನಿಧ್ಯ ಅಚ್ಚಳಿಯದ ಪ್ರಭಾವ ಬೀರಿತು. ಅವರನ್ನುದ್ದೇಶಿಸಿ ಸ್ವಾಮೀಜಿ, 'ಪರಿಹಾರ ನೀಡಲು ನೀವ್ಯಾರು? ಸೇವೆಯೊಂದೇ ನಿಮ್ಮಿಂದ ಸಾಧ್ಯ. ಅಹಂಕಾರವನ್ನು ತ್ಯಜಿಸಿ, ಎಲ್ಲ ಕಾಮನೆಗಳನ್ನು ದಹಿಸಿ, ಸತ್ಯ ಮತ್ತು ಪ್ರೀತಿಯ ಹಾದಿಯನ್ನು ಹಿಡಿದು, ನರರೂಪಿಯಾದ ನಾರಾಯಣನ ಸೇವೆಯನ್ನು ಮಾಡಿ... ನಿಮ್ಮ ಕೇಂದ್ರದ ಹೆಸರನ್ನು ಸೇವಾಶ್ರಮ (*Home of Service*) ಎಂದು ಇಡಿ' ಎಂದು ಆದೇಶಿಸಿದರು. ಅವರಿಗೆ ಮತ್ತಷ್ಟು ಸಹಾಯ ದೊರೆಯಲೆಂದು ಸ್ವಾಮೀಜಿ ಸಂಘದ ಪರವಾಗಿ ಜನರಲ್ಲಿ ಒಂದು ಮನವಿಯನ್ನು ಕೂಡ ಪ್ರಕಟಿಸಿದರು. ಹೆಚ್ಚು ಸಂಘಟಿತವಾಗಿ ಕೆಲಸ ಸಾಗುವಂತೆ ಮಾಡಲು ಮತ್ತು ಸಂಘಕ್ಕೆ ಸ್ಥಿರತೆಯನ್ನು ನೀಡಲು ೧೯೦೨ರ ನವಂಬರ್ ೨೩ರಂದು ಇದನ್ನು ರಾಮಕೃಷ್ಣ ಮಿಷನ್ನಿನ ಕೇಂದ್ರವನ್ನಾಗಿ ಸ್ವೀಕರಿಸಲಾಯಿತು.

೧೯೦೩ರಲ್ಲಿ ಕಾಶಿಗೆ ಸ್ವಾಮಿ ಬ್ರಹ್ಮಾನಂದಜಿ ಭೇಟಿಯಿತ್ತಾಗ, ಸೇವಾಕೇಂದ್ರದ ಚಟುವಟಿಕೆಗಳು ಸುಗಮವಾಗಿ ನಡೆಯಲು ಒಂದು ಸುಸಜ್ಜಿತವಾದ ಆಸ್ಪತ್ರೆಯನ್ನು ಕಟ್ಟಲು ನಿರ್ಧರಿಸಿ, ಸ್ವಾಮಿ ಶಿವಾನಂದರ ಮೇಲ್ವಿಚಾರಣೆಯಲ್ಲಿ ಲಕ್ಸಾ ಎಂಬಲ್ಲಿ ಒಂದು ಜಾಗವನ್ನು ೫೯೬೨ ರೂಪಾಯಿಗಳಿಗೆ ಖರೀದಿಸಲಾಯಿತು. ಅನೇಕ ಜನ ಉದಾರವಾಗಿ ಇದಕ್ಕೆ ಸಹಾಯ ಮಾಡಿದರು. ಸ್ವಾಮಿ ವಿಜ್ಞಾನಾನಂದರು ಕಟ್ಟಡದ ಖರ್ಚಿಗೆ ಬೇಕಾಗುವ ಹಣದ ಅಂದಾಜನ್ನು ಮಾಡಿದರು. ಭಗಿನಿ ನಿವೇದಿತೆಯವರೂ ಅವರ ಸಹಾಯಕ್ಕೆ ನಿಂತು, ಹಣವನ್ನು ಸಂಗ್ರಹಿಸಲು ದಾನಿಗಳಿಗೆ ನಿವೇದನೆಯನ್ನು ಮಾಡಿದರು. ತನ್ಮೂಲಕ ೧೯೦೮ರಲ್ಲಿ ಕೆಲಸ ಆರಂಭವಾಗಿ, ೧೯೧೦ರ ಜುಲೈ ತಿಂಗಳ ೬ನೆಯ ತಾರೀಖಿನಂದು ೫೦ ಹಾಸಿಗೆಗಳುಳ್ಳ ಆಸ್ಪತ್ರೆಯ ಉದ್ಘಾಟನೆಯಾಯಿತು. ಜನರಲ್ಲಿ ಅದು ಸೇವಾಶ್ರಮವೆಂದು ಪ್ರಸಿದ್ಧವಾಯಿತು. ೨೦ ಜನ ನಿರಾಶ್ರಿತ ವಿಧವೆಯರಿಗಾಗಿ ತಂಗುವ ವ್ಯವಸ್ಥೆಯನ್ನು ಮಾಡಲು ಅನೇಕರು ಸಹಾಯ ಮಾಡಲು ಮುಂದಾದರು. ದಶಾಶ್ವಮೇಧ ಘಟ್ಟದ ಹತ್ತಿರ ಕಾಶಿಯ ಪ್ರಸಿದ್ಧ ದಾನಿ ಶ್ರೀ ನಿವಾರಣಚಂದ್ರ ದಾಸರು ದಾನವಾಗಿ ನೀಡಿದ ಮನೆಯಲ್ಲಿ ೧೯೧೩ರಲ್ಲಿ ಈ ಸೇವಾಕಾರ್ಯವೂ ಪ್ರಾರಂಭವಾಯಿತು.

ಶ್ರೀಮಾತೆ ಶಾರದಾದೇವಿಯವರು ಸೇವಾಶ್ರಮಕ್ಕೆ ನವಂಬರ್ ೮, ೧೯೧೨ರಂದು ಭೇಟಿಯಿತ್ತರು. ಕಾಶಿಯಲ್ಲಿ ಸುಮಾರು ಒಂದು ತಿಂಗಳ ಕಾಲ ತಂಗಿದ್ದರು ಶ್ರೀಮಾತೆ. ಆಗ ಸ್ವಾಮಿ ಬ್ರಹ್ಮಾನಂದರು, ತುರೀಯಾನಂದರು,ಶುಭಾನಂದರು (ಶ್ರೀ ಚಾರು ಬಾಬು ಅವರ ಸಂನ್ಯಾಸದ ಹೆಸರು) ಕಾಶಿಯಲ್ಲಿದ್ದರು. ಶ್ರೀಮಾತೆಯವರು ಪಲ್ಲಕ್ಕಿಯಲ್ಲಿ ಕುಳಿತು, ಆಸ್ಪತ್ರೆಯ ಎಲ್ಲ ವಿಭಾಗಗಳಿಗೂ ಭೇಟಿಯಿತ್ತು, ಸಂತಸ ವ್ಯಕ್ತಪಡಿಸಿದರು. ಸ್ವಚ್ಛತೆ ಮತ್ತು ರೋಗಿಗಳ ವ್ಯವಸ್ಥಿತ ಶುಶ್ರೂಷೆಯನ್ನು ಕಂಡು 'ಶ್ರೀರಾಮಕೃಷ್ಣರು ಇಲ್ಲಿ ಪ್ರತ್ಯಕ್ಷ ವಾಸವಾಗಿದ್ದಾರೆ. ಶ್ರೀಲಕ್ಷ್ಮಿಯು ಇಲ್ಲಿ ನೆಲೆ ನಿಂತಿದ್ದಾಳೆ. ಇಂತಹ ಪ್ರಶಾಂತ ಸುಂದರ ಪರಿಸರವನ್ನು ಬಿಟ್ಟು ಹೋಗುವುದಕ್ಕೆ ಮನಸ್ಸೇ ಬರುವುದಿಲ್ಲ' ಎಂದರು ಶ್ರೀಮಾತೆ. ಸೇವಾಶ್ರಮಕ್ಕೆ ಕಾಣಿಕೆಯಾಗಿ ಹತ್ತು ರೂಪಾಯಿಗಳನ್ನು ಕಳುಹಿಸಿ ಕೊಟ್ಟರು. ಅತ್ಯಮೂಲ್ಯವಾದ ಆ ಹತ್ತುರೂಪಾಯಿ ನೋಟನ್ನು ಬಹಳ ಜೋಪಾನವಾಗಿ ಇಡಲಾಗಿದ್ದು ಇಂದಿಗೂ ಅದನ್ನು ಕಾಣಬಹುದು.

## ಸೇವಾಶ್ರಮದ ಚಟುವಟಿಕೆಗಳ ವಿಸ್ತರಣೆ

**೧. ರೋಗಿ ನಾರಾಯಣನ ಸೇವೆ :** ೨೬೧ ರೋಗಿಗಳ ಸೇವೆಯಿಂದ ೧೯೦೦-೧೯೦೧ರಲ್ಲಿ ಪ್ರಾರಂಭವಾದ ಈ ಸೇವೆ ಕ್ರಮೇಣ ಬೆಳೆಯುತ್ತ ಹೆಚ್ಚು ಹೆಚ್ಚು ಆರ್ತರ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡಿತು. ಸಮೀಪದಲ್ಲಿದ್ದ ೮ ಎಕರೆ ಜಮೀನನ್ನು ಸರ್ಕಾರದ ಸಹಾಯದಿಂದ ಖರೀದಿಸಿ ೧೯೧೬ರಲ್ಲಿ ಆಸ್ಪತ್ರೆಗೆ ೩೫ ಹಾಸಿಗೆಗಳುಳ್ಳ ೫ ವಾರ್ಡುಗಳನ್ನು ಸೇರಿಸಲಾಯಿತು. ನಂತರ ಆಸ್ಪತ್ರೆಯ ಸಿಬ್ಬಂದಿವರ್ಗದವರಿಗೆ ವಸತಿ, ಶಸ್ತ್ರ ಚಿಕಿತ್ಸೆ ವಿಭಾಗಗಳು ಸೇರಿಕೊಂಡು ಈಗ ಆಸ್ಪತ್ರೆಯು ೧೧೬ ಪುರುಷರಿಗೆ ಹಾಸಿಗೆಗಳನ್ನೂ ಎಕ್ಸ್-ರೇ, ಇ.ಸಿ.ಜಿ.ಯಂತಹ ಸುಸಜ್ಜಿತ ವ್ಯವಸ್ಥೆಗಳನ್ನೂ ಹೊಂದಿದ್ದು ರೋಗಿಗಗಳಿಗೆ ಸೂಕ್ತ ರೀತಿಯಲ್ಲಿ ಸೇವೆಯನ್ನು ನೀಡುವಲ್ಲಿ ಯಶಸ್ವಿಯಾಗಿದೆ. ೧೯೨೦ರಲ್ಲೇ ಮಹಿಳೆಯರಿಗಾಗಿ ಪ್ರತ್ಯೇಕ ವಿಭಾಗವನ್ನು ತೆರೆಯಲಾಯಿತು. ಕ್ರಮೇಣ ಇದೂ ಕೂಡ ಉನ್ನತಿಯನ್ನು ಹೊಂದಿದ್ದು ಈಗ ೧೧೪ ಮಹಿಳೆಯರಿಗೆ ಶುಶ್ರೂಷೆ ನೀಡುವ ಸೌಲಭ್ಯವನ್ನು ಹೊಂದಿದೆ. ಇದರೊಂದಿಗೆ ವರ್ಷಕ್ಕೆ ೨.೨೦ ಲಕ್ಷ ಹೊರರೋಗಿಗಳಿಗೆ ಚಿಕಿತ್ಸೆ ನೀಡುವ ವಿಭಾಗ, ಸಣ್ಣ ಪ್ರಮಾಣದ ಶಸ್ತ್ರಚಿಕಿತ್ಸೆ, ಔಷಧಾಲಯ ಹಾಗೂ ಮಹಿಳಾ ಸಿಬ್ಬಂದಿಯವರಿಗೆ ವಸತಿ ಸೌಲಭ್ಯಗಳನ್ನೂ ಹೊಂದಿದ್ದು, ಈಗ ಈ ಆಸ್ಪತ್ರೆಯು ಬಹಳ ಹೆಸರುವಾಸಿಯಾಗಿದೆ. ಈ ಎಲ್ಲ ಆಧುನಿಕೀಕರಣ ಮತ್ತು ವಿಸ್ತರಣೆಗಳಿಗೆ ಸಾವಿರಾರು ಜನ ಭಕ್ತರ ಶ್ರದ್ಧಾಪೂರಿತ ಕಾಣಿಕೆಯೇ ಕಾರಣವೆಂಬುದು ಗಮನಾರ್ಹ ಅಂಶ.

**೨. ನಿರಾಶ್ರಿತರ ವಸತಿಗೃಹ :** ದಶಾಶ್ವಮೇಧ ಘಟ್ಟದ ಹತ್ತಿರ ೧೯೧೩ರಲ್ಲಿ ಶ್ರೀನಿವಾರಣ ಚಂದ್ರದಾಸರ ಮನೆಯಲ್ಲಿ ಶುರುವಾದ ಈ ಸೇವಾಕಾರ್ಯವನ್ನು ನಂತರ ಸೇವಾಶ್ರಮದ ಪ್ರಾಂಗಣದೊಳಗೆ ಸೇರಿಸಲಾಯಿತು. ಅದಕ್ಕಾಗಿ ಹೊಸ ಜಾಗವನ್ನು ಕೊಂಡು ೧೯೩೦ರಲ್ಲಿ ೫೦ ಮಹಿಳೆಯರಿಗೆ ಆಶ್ರಯ ನೀಡುವ ವ್ಯವಸ್ಥೆಯನ್ನು ಮಾಡಲಾಯಿತು. ೧೯೮೬ರಲ್ಲಿ ಮತ್ತಷ್ಟು ಕೊಠಡಿಗಳನ್ನು ಸೇರಿಸಿ

ಈಗ ೬೫ಕ್ಕೂ ಹೆಚ್ಚು ಮಹಿಳೆಯರಿಗೆ ತಂಗುವ ವ್ಯವಸ್ಥೆ ಇದೆ. ೧೯೨೩ರಲ್ಲಿ ೨೫ ಜನ ಪುರುಷರಿಗೂ ವಸತಿಯನ್ನು ಪ್ರಾರಂಭಮಾಡಿ, ೧೯೯೨ರಲ್ಲಿ ಅವರಿಗಾಗಿ ಹೊಸ ಕಟ್ಟಡದ ಉದ್ಘಾಟನೆ ಯಾಯಿತು. ಈ ಸೇವೆಗಳಿಗೆ ಭಾರತ ಸರ್ಕಾರ, ಉತ್ತರ ಪ್ರದೇಶ ಸರ್ಕಾರ, ಭಾರತ ಹಾಗೂ ಇತರ ದೇಶಗಳ ದಾನಿಗಳು ಸಹಾಯ ಮಾಡಿದ್ದಾರೆ.

## ೩. ಇತರ ಚಟುವಟಿಕೆಗಳು


೧) ೧೯೮೦ರಲ್ಲಿ ವೃದ್ಧ ಸಾಧುಗಳಿಗಾಗಿ ಒಂದು ವಸತಿಗೃಹವನ್ನು ಕಟ್ಟಲಾಯಿತು. ಹತ್ತು ಜನ ಸಾಧುಗಳು ಈಗ ಅಲ್ಲಿ ತಂಗಿದ್ದು ನಿವೃತ್ತಿ ಜೀವನವನ್ನು ನಡೆಸುತ್ತಿದ್ದಾರೆ.

೨) ಸಾರ್ವಜನಿಕರಿಗಾಗಿ ರೋಗಗಳನ್ನು ಪತ್ತೆ ಹಚ್ಚಲು ಆಧುನಿಕ ಉಪಕರಣಗಳನ್ನು ಹೊಂದಿರುವ ಡಯಾಗ್ನಿಸ್ಟಿಕ್ ಲ್ಯಾಬ್ ತೆರೆಯಲಾಗಿದೆ. ತಪ್ಪಿಲ್ಲದೆ, ಕಡಿಮೆ ಬೆಲೆಗೆ ರೋಗಗಳನ್ನು ಗುರುತಿಸಲು ಸಹಕರಿಸುವ ಈ ವಿಭಾಗ ಸಹಸ್ರಾರು ಜನರಿಗೆ ನೆರವು ನೀಡಿ ಪ್ರಸಿದ್ಧವಾಗಿದೆ.

೩) ೧೯೯೭ರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಅತ್ಯಗತ್ಯ ವಾಗಿರುವ ಔಷಧೋಪಚಾರಗಳನ್ನು ವಾರಕ್ಕೆ ಒಂದು ದಿನವಾದರೂ ತಲುಪಿಸಿ ಸೇವೆಯನ್ನು ಸಲ್ಲಿಸಲು ಸಂಚಾರಿ ಆಸ್ಪತ್ರೆಯನ್ನು ಪ್ರಾರಂಭಿಸಲಾಯಿತು. ವರ್ಷಕ್ಕೆ ಸುಮಾರು ೧೫೦೦೦ ರೋಗಿಗಳ ಸೇವೆಯನ್ನು ಸಲ್ಲಿಸುತ್ತಿದೆ ಈ ಸಂಚಾರಿ ಆಸ್ಪತ್ರೆ.

೪) ನಿರಾಶ್ರಿತ ವಿಧವೆಯರಿಗೆ ಪ್ರತಿತಿಂಗಳೂ ಧನಸಹಾಯವನ್ನು ನೀಡುವ ವ್ಯವಸ್ಥೆಯನ್ನು ೧೯೮೯ರಿಂದ ಪ್ರಾರಂಭಿಸಲಾಯಿತು. ತನ್ಮೂಲಕ ಸುಮಾರು ೨೦೦ ಬಡಮಹಿಳೆಯರ ಜೀವನಕ್ಕೆ ಆಧಾರ ದೊರೆತಿದೆ.

೫) ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ಪೌಷ್ಟಿಕ ಆಹಾರವನ್ನು ಕೊಡಲೋಸುಗ ಮತ್ತು ಸಿಬ್ಬಂದಿ ವರ್ಗದವರ ಉಪಯೋಗಕ್ಕಾಗಿ ೬೫ ಹಸುಗಳುಳ್ಳ ಒಂದು ಗೋಶಾಲೆಯನ್ನು ನಡೆಸಲಾಗುತ್ತಿದೆ.



ಪುರುಷರ ವೃದ್ಧಾಶ್ರಮದ ಕಟ್ಟಡ, ಕಾಶಿ ಸೇವಾಶ್ರಮ



ಮಹಿಳೆಯರ ವೃದ್ಧಾಶ್ರಮದ ಕಟ್ಟಡ, ಕಾಶಿ ಸೇವಾಶ್ರಮ

೬) ೧೯೦೫ರಲ್ಲೇ ಪ್ರಾರಂಭವಾದ ಸಾರ್ವಜನಿಕ ಗ್ರಂಥಾ ಲಯವು ಧಾರ್ಮಿಕ ಗ್ರಂಥಗಳು, ಮಾಸಪತ್ರಿಕೆಗಳು, ದಿನಪತ್ರಿಕೆಗಳು ಹಾಗೂ ಇತರ ಗ್ರಂಥಗಳನ್ನು ಹೊಂದಿದ್ದು ಸಮೀಪದ ನಿವಾಸಿಗಳಿಗೆ ಸಾಮಾಜಿಕ ಮತ್ತು ಆಧ್ಯಾತ್ಮಿಕ ಬೆಳಕನ್ನು ನೀಡುತ್ತಿದೆ.

೭) ರಾಮಕೃಷ್ಣ-ವಿವೇಕಾನಂದ-ವೇದಾಂತ ಸಾಹಿತ್ಯವನ್ನು ಮಾರುವ ಪುಸ್ತಕ ಮಳಿಗೆ ಕಡಿಮೆ ದರದಲ್ಲಿ ಉತ್ತಮ ಧಾರ್ಮಿಕ ಸಾಹಿತ್ಯವನ್ನು ಭಕ್ತಾದಿಗಳಿಗೆ ಒದಗಿಸುತ್ತಿದೆ.

೮) ಕಾಶಿ ವಿಶ್ವನಾಥನ ದರ್ಶನಕ್ಕಾಗಿ ಬರುವ ಸಹಸ್ರಾರು ಯಾತ್ರಿಗಳು ದಾರಿತಪ್ಪಿ ಗೊಂದಲಕ್ಕೀಡಾದಾಗ ಅವರಿಗೆ ನೆರವು ನೀಡಿ, ತಾತ್ಕಾಲಿಕ ವಸತಿ ಮುಂತಾದ ಸೌಲಭ್ಯಗಳನ್ನು ನೀಡ ಲಾಗುತ್ತಿದೆ.

೯) ಪ್ರಕೃತಿಯ ವಿಕೋಪಗಳು ಬಂದೊದಗಿದಾಗ ಪರಿಹಾರ ಕಾರ್ಯವನ್ನು ಕೈಗೊಂಡು ಆರ್ತರಿಗೆ ನೆರವು ನೀಡುವ ಸೇವೆ ಅನೇಕ ಬಾರಿ ನಡೆದಿದೆ. ೧೯೧೬ರಲ್ಲಿ ಪ್ರವಾಹ ಪರಿಹಾರ ಕಾರ್ಯ, ೧೯೧೮ರ ಫ್ಲೂರೋಗದ ಸಾಂಕ್ರಾಮಿಕ ಅನಾಹುತ ಪರಿಹಾರ ಸೇವೆ, ೧೯೨೬ರ ಕಾಲೆರಾ ರೋಗದ ಹಾವಳಿಯ ಪರಿಹಾರ ಕಾರ್ಯ, ೧೯೩೪ರಲ್ಲಿ ಬಿಹಾರದಲ್ಲಾದ ಭೂಕಂಪದ ಪರಿಹಾರ ಕಾರ್ಯ—ಇವೆಲ್ಲ ಸೇವಾಶ್ರಮದ ವತಿಯಿಂದ ನಡೆದಿರುವ ಹಲವು ವಿಶಿಷ್ಟ ಸೇವೆಗಳು.

೧೦) ೩೬ ಬಡವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಖರ್ಚಿಗಾಗಿ ಧನಸಹಾಯವನ್ನೂ ನೀಡಲಾಗುತ್ತಿದೆ.

ರಾಮಕೃಷ್ಣ ಮಹಾಸಂಘದ ಧ್ಯೇಯವಾದ 'ಶಿವಜ್ಞಾನೇ ಜೀವಸೇವಾ—ಶಿವನೆಂದು ತಿಳಿದು ನರನ ಸೇವೆ' ಎಂಬ ಸೇವಾ ತತ್ತ್ವವನ್ನು ಸಮಗ್ರರೂಪದಲ್ಲಿ ಅನುಷ್ಠೇಯಗೊಳಿಸಿರುವ ಸಂಸ್ಥೆ ಈ ಸೇವಾಶ್ರಮ. ಇದೀಗ ತನ್ನ ಶತಮಾನೋತ್ಸವವನ್ನು ಆಚರಿಸುತ್ತಿರುವ ಈ ಸಂಸ್ಥೆ ತನ್ನ ಸೇವೆಯ ಮೂಲಕ ರಾಮಕೃಷ್ಣ ಸಂಘದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ